RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೨೬ —

ಸತ್ಯವಾದಿ
SATYAVADI

ಸಂಪಾದಕರು— ಅರಮನೆ ಸಂಸ್ಥೇದಾರ್ ಎಂ. ವಿ ಸುಬ್ಬಂಕಯ್ಯರು [ಬಿಡಿ ಪ್ರತಿ 3 ಪೈ

3—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

106 (2)

ಸತಂತ್ರ ಪಕ್ಷ, ಜನಸಂಘದ ವಿಜಯದಿಂದ ನೆಹರೂರಿಗೆ ಗಾಭರಿ

ಉತ್ತರ ಪ್ರದೇಶ, ಬಿಹಾರ್, ಮಧ್ಯ ಪ್ರದೇಶ ಮತ್ತು ಗುಜರಾತ್‌ಗಳಲ್ಲಿ ಬಲ ಪಕ್ಷ ಬಲಗಳು ಸ್ವತಂತ್ರ ಪಕ್ಷ ಮತ್ತು ಜನ ಸಂಘಗಳ ವಿಜಯ ಪ್ರದರ್ಶನ ಮಾಡಿರುವುದು ನಿಧಾನ ಪಂ॥ ನೆಹರೂರವರಿಗೆ ಗಾಭರಿ ಹುಟ್ಟಿಸಿದೆ ಎಂದು ನೆಪ ದೆಹಲಿಯಿಂದ ವಾರ್ತೆ ಬಂದಿದೆ ಪ್ರತ್ಯೇಕತೆಯ ಭಾವನೆಯು ಸ್ವಲ್ಪ ಪ್ರಭಾವ, ದಾಪಿಡ ಮುನ್ನೇತ್ರ ಕಳಗಂ ಜಯಗಳಿಸಿರುವ ಕುರಿತು ನೆಹರ ಕಾತರಿಗೊಂಡಿರುವಂತೆ

ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಗಲಿ

ತನಿಷ್ಕ ಕಾಯ್ರ್ಯಕ್ರಮದ ಆಧಾರದಿಂದ ಮೇಲೆ ಕಾಂಗ್ರೆಸಿನ ವಿರೋಧ ಪಕ್ಷ ಗಳೆಲ್ಲ ಒಂದಾಗಿ ಪ್ರಧ್ಯ ಪ್ರದೇಶದಲ್ಲಿ ಕಾಂಗ್ರೆಸ್ಸೇತರ ಸರ್ಕಾರದ ರಚನೆ ಮಾಡಬೇಕೆಂದು ಹೊಂಹೋಗಿ ತ್ರಿವೇದಿ ಮಧ್ಯ ಪ್ರದೇಶ ವಿಧಾನ ಸಭೆಯ ಸೋಷಲಿಸ್ಟ ಶಾಂಡಿದ ನಾಯಕ ಶ್ರೀ ಜಗದೀಶಜೋಷಿ ಯವರು ನಿನ್ನೆ ರಾಪತಿಭವನದಲ್ಲಿ ತಿಳಿಸಿದರು.

ದಂಗೆಕೋರರ ನೆರವಿನ ಅಪೇಕ್ಷೆ

ಮಧ್ಯ ಪ್ರದೇಶ ವಿಧಾನ ಸಭೆಯಲ್ಲಿ ಬಹುಮತ ಪಡೆಯುವುದಕ್ಕಾಗಿಯೂ ಕಾಂಗ್ರೆಸು ಗೆದ್ದಿರುವ ದಂಗೆಕೋರ ಕಾಂಗ್ರೆಸಿಗರನ್ನ ತನ್ನೊಡನೆ ಸೇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ಭೋಪಾಲಿನಿಂದ ವಾರ್ತೆ ಬಂದಿದೆ

ನಾಳೆಯ ಪಂಚಾಂಗ

ಅಷ್ಟಮಿ ಮಹಾನವಮಿದರ್ಶ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ವಿಂಪಶ್ಯ್ಯಷ್ಣ ಜೋಯಿಸರಿಂದ

ಶಕ ಜೋದಶಿ ಶ್ರವಣಿ ಮಹಾ
ನಿಷಾಂತಿ,

ಭಾಷಾ ಪಿಪರಾತಿ ಪಾಂಡೆ ಪ್ರಯುಕ್ತ
ಸೋಷಲಿಸ್ಟ ಪಕ್ಷಕ್ಕೆ ಜ.

ಚುನಾವಣೆ ಮಾಡಲು ಅವಕಾಶ ಕೊಡಬೇಕೆಂದು ನಿಜಲಿಂಗಪ್ಪನವರಂ ಗುಂಪಿನ ಒತ್ತಾಯ

ಆಂಧ್ರ ರಾಜಕೀಯ

ಆಂಧ್ರಪ್ರದೇಶ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ಸಂಜೀವ ರೆಡ್ಡಿಯವರಿಗೆ ದೊರೆಯು ಒಪ್ಪುವುದೆಂದು ನಿನ್ನೆ ದೆಹಲಿ ವಾರ್ತೆ ಆಂಧ್ರದ ಮುಖ್ಯ ಮಂತ್ರಿ ಶ್ರೀ ಡಿ. ಸಂಜೀವಯ್ಯನವರು ಮತ್ತು ಶ್ರೀ ಅಲ್ಲೂರಿ ಸತ್ಯನಾರಾಯಣರಾಜುರವರು ನಿನ್ನೆ ನವದೆಹಲಿಯಲ್ಲಿ ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರನ್ನು ಕಂಡು ಮಾತುಕತೆಗಳನ್ನು ನಡೆಸಿ, ಆಂಧ್ರ ಕಾಂಗ್ರೆಸಿನೆಲ್ಲಿರುವ ಗುಂಪುಗಳ ಬಲಾಬಲವನ್ನು ತಿಳಿಸಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಅವಕಾಶ ಕೊಟ್ಟರೆ, ಸಂಜೀವಯ್ಯನವರು ಚುನಾವಣೆಗೆ ಸೈಧ್ಧಾಸುವರು. ಪರಿಧಾನಕ್ಕೆ ಅವಕಾಶ ಇದೆ

ಬರ್ಮಾದಲ್ಲಿ ಸೇನೆ ಆಡಳಿತ ಬಂತು

ರಂಗೂನು 2— ಬರ್ಮಾ ಸೈನ್ಯವು ಏಕದಂ ಆಡಳಿತವನ್ನು ಆಕ್ರಮಿಸಿದೆ; ಮುಖ್ಯ ಸೈನಾಧಿಕಾರಿ ಜ॥ ನೆ ವಿನ್ನರು ಆಕಾಶವಾಣಿ ಭಾಷಣದಲ್ಲಿ, ತಮ್ಮ ಆಧ್ಯಕ್ಷತೆಯಲ್ಲಿ ಒಂದು ಕಾರ್ಯಾಂತೆ ಸಮಿತಿ ಸ್ಥಾಪಿಸಲಾಗಿದೆಯೆಂದು ತಿಳಿಸಿದರು — ಪ್ರಧಾನಿಯು ಸೊ ವೆತ್, ಅವರ ಸ್ನೇಹಿತರು ಮಂತ್ರಿಗಳು ಮಿಲಿಟರಿ ಬಂಧನದಲ್ಲಿದ್ದಾರೆ — ದೇಶದ ಶಾಂತಿಗಾಗಿ ಆಡಳಿತವನ್ನು ಮಿಲಿಟರಿ ವಹಿಸಿಕೊಂಡಿರುವುದೆಂದೂ ಜನರಲ್ ನೆ ವಿನ್ ರು ತಿಳಿಸಿರುವರು

ಅಮೆರಿಕದ ಗಗನಚಾರಿ ಜಾನ್ ಗ್ಲೆನ್‌ರಿಗೆ ಬಿಟ್ಟಗೆ ಭೇಟಿ ಕೊಡುವಂತೆ ಆಹ್ವಾನಿಸಿರುವುದಾಗಿ ಪ್ರಧಾನಿ ನೆಹರೂ ಲೋಕಸಭೆಯಲ್ಲಿ ತಿಳಿಸಿದರು

ಪ್ರಜಾಪ್ರಭುತ್ವ ತಲೆಕೆಳಗೆ

ನವದೆಹಲಿ 2— ಬರ್ಮಾ ಆಡಳಿತ ಮಿಲಿಟರಿ ಕೈಗೆ ಬಂದಿದ್ದು ವಿಷಾದದಲ್ಲಿ ಪ್ರಜಾಪ್ರಭುತ್ವ ತಲೆಕೆಳಗಾಯಿತೆಂದೂ ರಾಜಕೀಯ ವರ್ತಕರಲ್ಲಿ ಮಾತುಕತೆ ನಡೆಯುತ್ತಿದ್ದರೂ ಪಂ॥ ನೆಹರೂ ಖಿನ್ನರಾಗಿ ನವದೆಹಲಿಯಲ್ಲಿ ಪತ್ರಿಕಾ ಸಂಪಾದಕರಿಗೆ ಔತಣ ಕೂಟ ಏರ್ಪಡಿಸಿದ್ದರು. ಆದರೆ ಅವರು ಬರಲಿಲ್ಲ. ಆದಿಂದ ಪೂರ್ಣ ವಿಷ್ಕಂಣೆಯನ್ನು ಅಧ್ಯಯನ ಮಾಡಬೇಕು ಎಂದರಂತೆ — ಪರಿಷ್ಕೃತ ದೆಹಲಿನ ರಾಜಾಭಾರಿ ಕಚೇರಿಯವರೆಲ್ಲಿ ಸುರಕ್ಷಿತವಾಗಿರುವುದಾಗಿ ವಿವರಿಸಿದೆ.

೦೮

ಒರಿಸ್ಸಾ ವಿಧಾನ ಸಭೆಯ ಓರ್ವರೇ ಸೋಷಲಿಸ್ಟ್ ಸದಸ್ಯರಾದ ಶ್ರೀ ಗಣಪತಿ ಪ್ರಧಾನರನ್ನು ನಿನ್ನೆ ಸಭೆಯಿಂದ ಹೊರಗೆ ಕಳುಹಿಸಲಾಯಿತೆಂದು ಭಾಷಿನೇಶ್ವರದಿಂದ ವಾರ್ತೆ ಬಂದಿದೆ ಒರಿಯಾದಿಲ್ಲಿ ಮುಖ್ಯ ಮಂತ್ರಿಯವರು ಅಂದಾಜುಪಟ್ಟಿ ಭಾಷಣ ಮಾಡಬೇಕೆಂದೂ ಆ ವೇಳೆ ಚರ್ಚೆಯು ಮಾಡಿದರು

೦೯

ಅಂಡಿನ್ಸನೆ ಗಾರ್ಡಿಯರ್ ಪತ್ರಿಕೆ ಲೇಖನವನ್ನು ಭಾರತ ಚುನಾವಣೆಗೆ ಸಂಬಂಧಪಟ್ಟಂತೆ ಬರೆದು ಪರಿಣಾಮಕಾರಿಯಾದ ವಿರೋಧಪಕ್ಷ ಇಲ್ಲ ಎಂದು ತಿಳಿಸಿದ. ಪ್ರಜಾ ಸೋಷಲಿಸ್ಟ ಪಕ್ಷ ಹೋಗುತ್ತಿದೆ ಎಂದಿದೆ.

೦೦

ಭಾರತ ಸೇನೆಯು ಜೀಪಿನ ಮೇಲೆ ಶತ್ರು ನಾಗಾಗಳು ಗುಂಡು ಹಾರಿಸಲು ಓರ್ವ ಸೈನಿಯ ಮೃಂಡಿಹೂಂದಿ ನಾಲ್ಕು ಜನಕ್ಕೆ ಗಾಯ ಆಗಿದೆ ಎಂದು ಇಂಫಾಲಿನಿಂದ ವಾರ್ತೆ

೦೦

ಮೊನ್ನೆ ಅಮೆರಿಕದ ಗಗನ ಪ್ರಯೋಗ ಜಾನ್ ಗ್ಲೆನ್ ಸ್ಮೃಯಾರ್ಕ್‌ಗೆ ಅಗಮಿಸಿದಾಗ ಮೊನ್ನೆಯ ಲಕ್ಷ ಜನ ಅವರಿಗೆ ಸುಸ್ವಾಗತವಿತ್ತರು.

ವಾರ್ತಾ ವಿಶೇಷಗಳು

ಅಮೆರಿಕ ಹಾಗೂ ಬ್ರಿಟನ್ ಜಂಟಿಯಾಗಿ ನೆನೇಡಾದಲ್ಲಿ ಅಣು ಪ್ರಯೋಗ ಮಾಡಿತೆಂದು ವಾಷಿಂಗ್ಟನ್ ವಾರ್ತೆ.

ಕುಂಭಕೋಣದಿಂದ ಬಂದಿರುವ ವಾರ್ತೆ ಪ್ರಕಾರ ಮದ್ರಾಸು-ತಿರುವೇಂದ್ರ ಎಕ್ಸ್‌ಪ್ರೆಸಿನವರು ರೈಲಿನ ಎಂಡು ಬೋಗಿಗಳು ಬಿದ್ದು 20 ಮಂದಿ ಗಾಯಗೊಂಡರು

ಉತ್ತರ ಪ್ರದೇಶದ ವಿಧಾನ ಸಭೆಗೆ ಫತೇಪುರ ಜಿಲ್ಲೆಯ ಕಿಷನ್‌ಪುರ ಕ್ಷೇತ್ರದಿಂದನಡೆದ ಚುನಾವಣೆಯಲ್ಲಿ ಒಂದು ಓಟು ಕೆಡಲಿಲ್ಲ !

ಪೂರ್ವ ಯೂರೋಪಿಯನ್ ಕಮಿಷನ್ ಸಂಗಡ ಭಾರತ ಸಂಪರ್ಕ ಪಡೆದಿದೆ.

ಕೊಯಿಂಬತ್ತೂರ ಮಂತ್ರಿ ಮಂಡಲದ ಮಾಜಿ ಮಂತ್ರಿ ಪಂಪೇರರರು ಮತ್ತಿತರ 75 ಮಂದಿ 21 ದಿವಸಗಳಲ್ಲಿ ನೇಪಾಳಕ್ಕೆ ವಾಪಸು ಬಂದೆ ಇದ್ದರೆ ಅವರ ಆಸ್ತಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವದಾಗಿ ತಿಳಿಸಿದೆ

ಕಳೆದ 21 ದಿನಗಳಿಂದ ನಡೆಯುತ್ತಿದ್ದ ಪಾಂಡವಪುರ ಸಕ್ಕರೆ ಕಾರ್ಖಾನೆ ಮುಷ್ಕರ ನಿನ್ನೆ ಮುಗಿಯಿತು

ಕೇಂಳ ಸರ್ಕಾರದ ಲಂಚ ನಿರೋಧ ಕಾಯಿದೆ ನಿನ್ನೆ ಸೆಲೆಕ್ಟ್ ಸಮಿತಿಗೆ ಕಳುಹಿಸಲ್ಪಟ್ಟಿದೆ

ಕಳೆದ ಚುನಾವಣೆಯಲ್ಲಿ ಮೈಸೂರು ರಾಜ್ಯದಲ್ಲಿ ಕಾಂಗ್ರೆಸಿಗೆ ಶೇಕಡ 52.08 ಓಟುಗಳು ಬಂದಿದ್ದವು ಈ ಬಾರಿ ಶೇಕಡ 49.46 ಮತಗಳು ದೊರೆತಿವೆ

ರಾಜಸ್ಥಾನದಲ್ಲಿ ಓರ್ವ ಸ್ವತಂತ್ರ ಅಭ್ಯರ್ಥಿ ಕಾಂಗ್ರೆಸಿಗೆ ಸೇರಿದ ಕಾರಣ ಕಾಂಗ್ರೆಸು ಅಲ್ಲಿ ಮಂತ್ರಿಮಂಡಲ ರಚಿಸಿದೆ.

ಶ್ರೀ ವಿಲಿಯಂ ಗೋಪಲ್ಲವರು ಸಿಂಹಳದ ಗವರ್ನರ್ ಜನರಲ್‌ರಾಗಿ ಸರಳ ಸಮಾರಂಭದಲ್ಲಿ ಕೊಲಂಬೋವಿನ ಕಮ್ಮಗೃಹದಲ್ಲಿ ಶ್ರೇಷ್ಠ ನ್ಯಾಯಾಧೀಶ ಶ್ರೀ ಬಸನಾಯಕೆಯವರ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು. ಅವರು ಚೀನ ಮತ್ತು ಅಮೆರಿಕಗಳಲ್ಲಿ ರಾಯಭಾರಿ ಆಗಿದ್ದರು.

ಅಸ್ಸಾಂ ವಿಧಾನ ಸಭೆಯಲ್ಲಿ ಓರ್ವ ಕಮ್ಯೂನಿಸ್ಟ ಸದಸ್ಯರೂ ಇಲ್ಲ.

ಮಹಾರಾಷ್ಟ್ರದಲ್ಲಿ ಕಾಂಗ್ರೆಸಿಗೆಶೇಕಡ 80 ರಷ್ಟು ಸ್ಥಾನಗಳು ದೊರೆತಿವೆ

SHAKTI SUDHA

A Superb Tonic

Help The 'Gorakshana'

Advertise in Goraksana and help the pious cause

ವುಡ್‌ಲ್ಯಾಂಡ್ಸ್ ಕೀರ್ತಿಯುತ 4 ನೇ ವಾರ

.... ನೋಡಿದವರೆಲ್ಲಾ ಪ್ರಶಂಸಿಸುತ್ತಿರುವ ಅಮೋಘ ಚಿತ್ರ ೨೪ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 2 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ಲೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

.... ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು ....

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.